"ನಿನ್ನೀ ಸುಸ್ತನ್ನು ಶಾಶ್ವತವಾಗಿ ಪರಿಹರಿಸೋಣ ಎಂದುಕೊಂಡಿದ್ದೇನೆ. ಏನನ್ನುತ್ತೀ?"

"ಅರ್ಥವಾಗಲಿಲ್ಲ, ಮಹಾಸ್ವಾಮಿ."

"ಎಲ್ಲಾ ಈ ಕೂಡಲೇ ಅರ್ಥವಾಗುತ್ತದೆ. ನನ್ನ ಔಷಧಿಯಲ್ಲಿ ನೀನು ಬೆರೆಸುತ್ತಿದ್ದ ವಿಷದ ಹೆಸರೇನು?"

"ಅಯ್ಯೋ! ಶಾಂತಂ ಪಾಪಂ! ನಾನು ನಿಮ್ಮ ಔಷಧಿಗೆ ವಿಷ ಬೆರೆಸುವವನೇ? ಅಂಥ ವಿಚಾರ ನನಗೆ ಬರುವುದಾದರೂ ಹೆಂಗೆ ಸಾಧ್ಯ?"

"ಮಾತಿನಲ್ಲಿ ಸಂಸ್ಕೃತ ಬೆರೆಸಿದ ಮಾತ್ರಕ್ಕೆ ಮಾಡಿದ ಪಾಪ ಪರಿಹಾರವಾಗುವುದಿಲ್ಲ. ಕಾಳಹಸ್ತಿ ಎಂದು ಅದರ ಹೆಸರು. ಅಲ್ಲವೇ? ನೀನೊಬ್ಬ ಮೂರ್ಖ ಕಣೋ. ನಿನ್ನನ್ನು ಮರಿಸ್ವಾಮಿ ಮಾಡಿ ವರ್ಷ ಹತ್ತಾದರೂ ನನ್ನ ಬಗ್ಗೆ ನೀನೇನೂ ತಿಳಿದುಕೊಂಡಂತಿಲ್ಲ. ನಾನು ವಿಷತಜ್ಞ ಕಣೋ."

"ವಿಷತಜ್ಞ?"

"ಅಲ್ಲದೆ ಎಂಥಾ ವಿಷವೂ ನನ್ನನ್ನು ಏನೂ ಮಾಡಲಾರದು. ಯಾಕೆ ಗೊತ್ತಾ?"

"ಗೊತ್ತಿಲ್ಲ ಸ್ವಾಮಿ."

"ಪೂರ್ವಾಶ್ರಮದಲ್ಲಿ ನನ್ನ ಮಲತಾಯಿ ನನ್ನನ್ನು ಕೊಲ್ಲಲೆಂದು ದಿನವೂ ನನಗೆ ವಿಷವುಣಿಸುತ್ತಿದ್ದಳು. ಆಶ್ಚರ್ಯವೆಂದರೆ ಅದರ ಪರಿಣಾಮವಾಗಿ ನನ್ನ ದೇಹದಲ್ಲಿ ಸಕಲ ವಿಷಗಳ ವಿರುದ್ಧವೂ ನಿರೋಧಕ ಶಕ್ತಿ ಬೆಳೆಯಿತು."

"ನನಗದು ಗೊತ್ತಿರಲಿಲ್ಲ."

"ಮಾತ್ರವಲ್ಲ, ನೀನು ವಿಷ ನೀಡುತ್ತಿದ್ದಂತೆ ಅದು ನನಗೆ ಆರೋಗ್ಯವರ್ಧಕವಾಗಿ ಪರಿಣಮಿಸಿತು, ಟಾನಿಕ್ಕಿನ ಹಾಗೆ."

"ಅದ್ಭುತ!"

"ಥೂ ನಿನ್ನ! ದೂರದ ಸಂಬಂಧಿಯೆಂದು ನಿರ್ಗತಿಕನಾದ ನಿನ್ನನ್ನು ಮರಿಸ್ವಾಮಿಯಾಗಿ ತೆಗೆದುಕೊಂಡೆ. ನೀನು ಮಾಡಿದ್ದೇನು? ನನ್ನ ಬುಡಕ್ಕೇ ಕೊಳ್ಳಿಯಿಡಲು ಪ್ರಯತ್ನಿಸಿದ್ದು. ತಾಳ್ಮೆಯಿಂದ ನನ್ನ ಚಾಕರಿ ಮಾಡಿಕೊಂಡಿರುತ್ತಿದ್ದರೆ ಒಂದಲ್ಲ ಒಂದು ದಿನ ಈ ಇಡೀ ಮಠದ ಉತ್ತರಾಧಿಕಾರಿ ನೀನೇ ಆಗುತ್ತಿದ್ದಿ. ನಿನ್ನನ್ನೀಗ ಏನು ಮಾಡುತ್ತೇನೆ ಗೊತ್ತಾ?"

"ಏನು ಬೇಕಾದರೂ ಮಾಡಿ, ಆದರೆ ಮಠದಿಂದ ಹೊರಹಾಕಬೇಡಿ ಸ್ವಾಮಿ," ಎಂದು ಮರಿಸ್ವಾಮಿ ಹಿರಿಸ್ವಾಮಿಯ ಕಾಲುಗಳಿಗೆ ಬಿದ್ದು ಹೊರಳಾಡತೊಡಗಿದ. ಹಿರಿಸ್ವಾಮಿ ಅವನನ್ನು ಒದ್ದು ಝಾಡಿಸಿ ನುಡಿದರು:

"ನಿನ್ನ ಪಾಪಕ್ಕೆ ನಿಜಕ್ಕೂ ಡೆತ್ ಪೆನಾಲ್ಟಿ ನೀಡಬೇಕು. ಆದರೆ ನಾವು ಹಾಗೆ ಮಾಡುವುದಿಲ್ಲ. ನಿನ್ನನ್ನು ಆಜೀವ ಪರ್ಯಂತ ಮಠದಿಂದ ಹೊರ ಹಾಕುತ್ತೇವೆ. ನೀನು ಇನ್ನು ಮುಂದೆ ಮಠದ ಒಳಕ್ಕೆ ಸುಳಿಯಬಾರದು! ಪಾರುಪತ್ತೇಗಾರರಲ್ಲೂ, ಕಾವಲುಗಾರರಿಗೂ ಈ ಬಗ್ಗೆ ಹೇಳಲಾಗಿದೆ. ಸದ್ಯದಲ್ಲೇ ನಾವು ಯೋಗ್ಯನಾದ ವಟುವೊಬ್ಬನನ್ನು ಮರಿಸ್ವಾಮಿಯಾಗಿ ನೇಮಿಸಲಿದ್ದೇವೆ."

"ಬೇರೆ ದಾರಿಯಿಲ್ಲವೇ?"

"ನಿನ್ನ ಸಾಮಾನುಗಳೇನಿವೆಯೋ ಅವನ್ನೆಲ್ಲ ಕಟ್ಟಿಕೊಂಡು ಹೊರಡು!'

"ಸರ್ವಸಂಗ ಪರಿತ್ಯಾಗ ಮಾಡಿದ ನನಗೆ ನನ್ನದೇ ಎಂದು ಏನಿದೆ ಸ್ವಾಮಿ?"